ದಿಃ05.04.2022 ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ. ಸಿ.ಆರ್.ಎಸ್., ವಕೀಲರಿಂದ 40 ನೇ ಪ್ರತಿ ಅರ್ಜಿದಾರರ ಪರವಾಗಿಃ

ದಿಃ02.05.1985 ರ ಭೂಮಂಜೂರಾತಿ ಆದೇಶದ ಜ್ಞಾಪನ ಪತ್ರದ ದೃಢೀಕೃತ ನಕಲನ್ನು ನಿ.ಆರ್.107 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 1 ರಿಂದ 4 ನೇ ಪ್ರತಿ ಅರ್ಜಿದಾರರ ಪರವಾಗಿಃ ಮಾನ್ಯ ಡಿಜಿಪಿರವರಿಂದಃ

ನಾನು ಕೋರುತ್ತಿರುವ ಭೂಸ್ವಾಧೀನಗೊಂಡಿರುಜವ ಜಮೀನು ನನ್ನ ತಾತ ವೆಂಕಟಸ್ವಾಮಿಯವರದ್ದು. ಅವರು ಹಾಸಿಗೆ ಹಿಡಿದಿದ್ದು ಅವರ ಪರವಾಗಿ ಸಾಕ್ಷಿ ನುಡಿಯತ್ತಿದ್ದೇನೆ. ನಾನು ಅವರ ಆರೋಗ್ಯ ಪರಿಸ್ಥಿತಿ ತೋರೀಸಲು ಯಾವುದೇ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಿಲ್ಲ ಎನ್ನುವುದು ಸರಿ.

2. ನನ್ನ ತಾತನದ್ದು ಪ್ರಸ್ತುತ ಭೂಸ್ವಾಧೀನದಲ್ಲಿ 38 ಗುಂಟೆ ಹೋಗಿರುತ್ತದೆ. ನನ್ನ ತಾತನಿಗೆ ಕಣ್ವ ಜಲಾಶಯದ ಮುಳುಗಡೆ ಮತ್ತು ಭೂಸ್ವಾದೀನದ ಪರಿಣಾಮವಾಗಿ ಸರ್ಕಾರದಿಂದ ಪ್ರಸ್ತುತ ಸ್ವಾಧೀನದ ಭೂಮಿ ಮಂಜೂರಾಗಿತ್ತು. ನಮ್ಮ ಜಮೀನಿನಲ್ಲಿ ಯಾವುದೇ ಮರಗಳು ಇರಲಿಲ್ಲ.

3. ನಾನು ಭೂಸ್ವಾಧೀನಗೊಂಡ ಜಮೀನಿನಲ್ಲಿ ಸ್ವಾಧೀನದಲ್ಲಿ ಇರಲಿಲ್ಲ ಮತ್ತು ಯಾವುದೇ ವ್ಯವಸಾಯ ಮಾಡುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಭೂಸ್ವಾಧೀನಗೊಂಡಿರುವ ಜಮೀನಿಗೆ ಹೆಚ್ಚಿನ ಪರಹಾರ ಬರುತ್ತಿರುವ ಕಾರಣಕ್ಕೆ ನಾವೇ ಸ್ವಾಧೀನದಲ್ಲಿದ್ದೇವೆಂದು ಸುಳ್ಳು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಈ ಪ್ರಕರಣದಲ್ಲ ಹಾಜರುಪಡಿಸಿರುವ ದಾಖಲೆಗಳನ್ನು ಪರಿಹಾರದ ಉದ್ದೇಶಕ್ಕೆ ಸೃಷ್ಟಿಸಿದ್ದು ಸುಳ್ಳು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.